
# ಶಾರೂಕ್ ಗುಡ್‌ಬೈ?



ಶಾರೂಕ್ ಖಾನ್ ಬಾಲಿವುಡ್ ಪ್ರವೇಶಿಸಿ 28 ವರ್ಷಗಳು ಉರುಳಿದವು. 1992ರ ಜೂನ್ ಕೊನೆಗೆ ಬಿಡುಗಡೆಯಾದ 'ದೀವಾನಾ' ಹಿಂದಿ ಚಿತ್ರರಂಗಕ್ಕೆ ಹೊಸ ಟ್ವಿಸ್ಟ್ ಕೊಟ್ಟ ಸಿನಿಮಾ. 'ಕೋಯಿ ನ ಕೋಯಿ ಚಾಹಿಯೇ...' ಎಂದು ಬೈಕ್ ಮೇಲೆ ಕುಳಿತು ಹಾಡುತ್ತಾ ಬೆಳ್ಳಿ ತೆರೆಯನ್ನು ಪ್ರವೇಶಿಸಿದ ಶಾರೂಕ್, ಈಗ ಹೆಲಿಕಾಪ್ಟರ್‌ನಲ್ಲಿ ಓಡಾಡುವ ಸೂಪರ್‌ಹೀರೊ. ಒಟ್ಟು ಆಯುಷ್ಯದ ಬಹುತೇಕ ಅರ್ಧದಷ್ಟನ್ನು ಬಾಲಿವುಡ್‌ನಲ್ಲೇ ಕಳೆದಿರುವ ಶಾರೂಕ್, ಈಗಲೂ 'ಕಿಂಗ್ ಖಾನ್' ಎಂದೇ ಹೆಸರುವಾಸಿ. ಮುಂದಿನ ನವೆಂಬರ್ 2ಕ್ಕೆ 55 ವರ್ಷ ಪೂರ್ಣಗೊಳಿಸಲಿರುವ ಶಾರೂಕ್ ವಿಶ್ವದಾದ್ಯಂತ ಕೋಟ್ಯಂತರ ಅಭಿಮಾನಿಗಳನ್ನು ಈಗಲೂ ಹೊಂದಿರುವುದು ಸುಳ್ಳಲ್ಲ. ಶ್ರೀಮಂತ ಸಿನಿಮಾನಟರ ಪಟ್ಟಿಯನ್ನು ಗಮನಿಸಿದರೆ, ಜಗತ್ತಿನಲ್ಲೇ ಅತ್ಯಧಿಕ ಹಣ ಸಂಪಾದಿಸಿರುವವರ ಪಟ್ಟಿಯಲ್ಲಿ ಶಾರೂಕ್ 7ನೇ ಸ್ಥಾನದಲ್ಲಿದ್ದಾರೆ. 600 ದಶಲಕ್ಷ ಡಾಲರ್ ಸಂಪತ್ತು ಹೊಂದಿದ್ದಾರೆ ಎಂದರೆ ಸುಮ್ಮನೇ ಅಲ್ಲ. 'ಸರ್ಕಸ್', 'ಫೌಜಿ' ಎಂದು ಎರಡು ಟಿ.ವಿ ಸೀರಿಯಲ್‌ಗಳಲ್ಲಿ ಪಡೆದ ಜನಪ್ರಿಯತೆಯನ್ನೇ ಏಣಿಯಾಗಿ ಇಟ್ಟುಕೊಂಡು ಶಾರೂಕ್ ಬಾಲಿವುಡ್‌ನಲ್ಲಿ ಏರಿದ ಎತ್ತರ ಅಸಾಮಾನ್ಯವಾದದ್ದು. ಸಿನಿಮಾ ಹಿನ್ನೆಲೆ ಇಲ್ಲದೆ ಬಾಲಿವುಡ್‌ಗೆ ಬಂದ ನಟನೊಬ್ಬ ಹೀಗೆ ಕಿಂಗ್ ಆಗುವುದು ಸುಲಭದ ಕೆಲಸವೂ ಅಲ್ಲ. ಅದರ ಹಿಂದೆ ಅವಿರತ ಶ್ರಮ, ಅಸಾಧ್ಯ ಚಾಣಾಕ್ಷತೆಯೂ ಕೆಲಸ ಮಾಡಿದೆ.

ಆದರೆ ಕಳೆದ ಒಂದೂವರೆ ವರ್ಷದಿಂದ ಸಿನಿಮಾಗಳಿಲ್ಲದೆ ಖಾಲಿ ಕುಳಿತಿರುವ ಶಾರೂಕ್, ನಿಧಾನಕ್ಕೆ ಕುರ್ಚಿ ಖಾಲಿ ಮಾಡುತ್ತಿದ್ದಾರೆಯೆ.. ಎನ್ನುವ ಪ್ರಶ್ನೆ ಈಗ ಜೋರಾಗಿ ಕೇಳಿಬರುತ್ತಿದೆ. 'ಕಿಂಗ್ ನಿವೃತ್ತಿಯ ಅಂಚಿನಲ್ಲಿದ್ದಾರೆ' ಎನ್ನುವ ಸುದ್ದಿಯೂ ಹಬ್ಬಿದೆ.

ಶಾರೂಕ್ ನಟಿಸಿದ ಕೊನೆಯ ಚಿತ್ರ 'ಝೀರೊ' ಬಿಡುಗಡೆಯಾದದ್ದು 2018ರ ಡಿಸೆಂಬರ್‌ನಲ್ಲಿ. ದೈಹಿಕವಾಗಿ ಕುಳ್ಳನಾಗಿರುವ ಹೀರೊ ಎತ್ತರದ ಹೀರೋಯಿನ್‌ಳನ್ನು ಪ್ರೀತಿಸುವ, ಬಾಹ್ಯಾಕಾಶ ಯಾನದಲ್ಲಿ ಸಾಧನೆ ಮಾಡುವ ಚಿತ್ರಕಥೆಯ ಪ್ರಯೋಗ ಸಖತ್ತಾಗಿ ಕೈಕೊಟ್ಟಿತು. 60 ಕೋಟಿಯಲ್ಲಿ ಮುಗಿಯಬಹುದಾಗಿದ್ದ ಸಿನಿಮಾಕ್ಕೆ 150 ಕೋಟಿ ಸುರಿದಿದ್ದು ಸ್ವತಃ ಹಣ ಹಾಕಿದ್ದ ಶಾರೂಕ್ ಕೈಸುಟ್ಟಿತು. ಆತ ಆ ವರ್ಷ ನಟಿಸಿದ್ದ "ಹ್ಯಾರಿ ಮೆಟ್ ಸೆಜಲ್" ಚಿತ್ರ ಬಂದು ಹೋದದ್ದೇ ನೆನಪಾಗುತ್ತಿಲ್ಲ. 'ಫ್ಯಾನ್' ಚಿತ್ರ ಬಾಕ್ಸಾಫೀಸ್‌ನಲ್ಲಿ ಪರವಾಗಿಲ್ಲ ಎನ್ನುವಷ್ಟೇ ಹಣ ತಂದುಕೊಟ್ಟಿತು. ಹ್ಯಾಟ್ರಿಕ್ ಸೋಲಿನ ಅನುಭವ.

2019ರಲ್ಲಿ ಶಾರೂಕ್ ಮತ್ತೆ ಮೇಲೆದ್ದು ಬರಲಿದ್ದಾರೆ ಎಂದು ಅಭಿಮಾನಿಗಳು ಜಾಲತಾಣಗಳಲ್ಲಿ ಬರೆದುಕೊಂಡದ್ದೇ ಬಂತು. 'ಬದ್ಲಾ' ದಲ್ಲಿ ಅಮಿತಾಭ್ ಜೊತೆಗೆ ನಟನೆ ಎಂದಾಯಿತು; ಆ ಸಿನಿಮಾ ಶಾರೂಕ್ ಇಲ್ಲದೆಯೇ ಸೂಪರ್ ಹಿಟ್ ಆಯಿತು. 'ಸಾರೆ ಜಹಾಂಸೆ ಅಚಾ', ತಮಿಳಿನ ಸೂಪರ್‌ಹಿಟ್ 'ವಿಕ್ರಂ ವೇದಾ'ದ ರಿಮೇಕ್, ಡಾನ್ 3, ಹೇ ರಾಮ್ ರಿಮೇಕ್ ಹೀಗೆ 2019ರಲ್ಲಿ ಶಾರೂಕ್ ಹೆಸರಿನಲ್ಲಿ ಲಿಂಕ್ ಮಾಡಲಾದ ಸಿನಿಮಾಗಳೆಲ್ಲ ಕಲ್ಪನೆಗಳಲ್ಲೇ ಉಳಿದವು. ನಡುವೆ ಸಂಜಯ ಲೀಲಾ ಬನ್ಸಾಲಿ ಜೊತೆಗೊಂದು ಸಿನಿಮಾ ಪಕ್ಕಾ ಎಂಬ ಸುದ್ದಿಯೂ ಠುಸ್ ಆಯಿತು.

ಒಂದಿಡೀ ವರ್ಷ ಸೋಲಿನ ಪರಾಮರ್ಶೆಯಲ್ಲೇ ಕಳೆದದ್ದು ಸುಳ್ಳಲ್ಲ. ಶಾರೂಕ್ ಸಿನಿಮಾಗಳು ಸೋತದ್ದೇಕೆ ಎನ್ನುವ ಪ್ರಶ್ನೆಗೆ ಸಿಕ್ಕಿದ ಉತ್ತರಗಳೂ ಕುತೂಹಲಕರ. ಶಾರೂಕ್‌ನನ್ನು ಇನ್ನು ಮುಂದೆ ರೊಮ್ಯಾಂಟಿಕ್ ಸಿನಿಮಾಗಳಲ್ಲಿ ನೋಡಲು ಅಭಿಮಾನಿಗಳು ಬಯಸುವುದಿಲ್ಲ ಎನ್ನುವುದು ಮೊದಲನೆಯದ್ದು. ಶಾರೂಕ್ ಚಿತ್ರಗಳನ್ನು ನಿರ್ದೇಶಿಸಿದ ನಿರ್ದೇಶಕರು ಈ ಹಿಂದೆ ಅಂತಹ ಶೈಲಿಯ ಚಿತ್ರಗಳನ್ನು ಮಾಡಿರಲಿಲ್ಲ. ಅವರ ಶೈಲಿಯೇ ಬೇರೆಯದ್ದು ಎನ್ನುವುದು ಎರಡನೇ ಕಾರಣ. ಪ್ರಯೋಗಗಳನ್ನು ಮಾಡುವಾಗ ಬಜೆಟ್ ಕಡಿಮೆ ಮಾಡಬೇಕು ಎನ್ನುವುದು ಮೂರನೇ ಉತ್ತರ. ಕೊನೆಯ ಎರಡು ಉತ್ತರಗಳನ್ನು ಗಮನಿಸಿ ಸರಿಪಡಿಸಿಕೊಳ್ಳಬಹುದು. ಆದರೆ ಮೊದಲನೇ ಅಂಶ ಅತ್ಯಂತ ಅಪಾಯಕಾರಿ. ಆರಂಭದ ಕೆಲವು ಚಿತ್ರಗಳಲ್ಲಿ ಆಂಟಿಹೀರೊ ಪಾತ್ರಗಳನ್ನು ಬಿಟ್ಟರೆ ಉಳಿದಂತೆ ಶಾರೂಕ್‌ನ ರೊಮ್ಯಾಂಟಿಕ್ ಹೀರೊ ಇಮೇಜ್‌ಗಳೇ ಚಿತ್ರಗಳನ್ನು ಗೆಲ್ಲಿಸಿದ್ದು. ರೊಮ್ಯಾಂಟಿಕ್ ಪಾತ್ರಗಳನ್ನು ಕೈಬಿಟ್ಟರೆ ಹೇಗೆ? ದಿಲ್‌ವಾಲೆ ದುಲ್ಹನಿಯಾ ಲೇ ಜಾಯೆಂಗೆ, ದಿಲ್ ತೊ ಪಾಗಲ್ ಹೈ, ಕುಛ್ ಕುಛ್ ಹೋತಾ ಹೈ, ಕಭೀ ಖುಷಿ ಕಭೀ ಘಮ್, ಮೈ ನೇಮ್ ಈಸ್ ಖಾನ್, ಮೈ ಹೂಂ ನಾ ಮುಂತಾದ ಚಿತ್ರಗಳ ಪಾತ್ರಗಳನ್ನು ಬಿಟ್ಟು ಶಾರೂಕನ್ನು ನೆನಪಿಸಿಕೊಳ್ಳುವುದಾದರೂ ಹೇಗೆ?

2020 ಕೂಡಾ ಶಾರೂಕ್ ವೃತ್ತಿಜೀವನಕ್ಕೆ ಹೊಸ ಚೈತನ್ಯ ತುಂಬುವಂತೆ ಕಾಣುತ್ತಿಲ್ಲ. ಕೊರೊನಾ ವೈರಸ್ ದಾಳಿ ಇದಕ್ಕೆ ಮುಖ್ಯ ಕಾರಣ ಎನ್ನುವುದು ಸುಲಭ. ಆದರೆ 'ಕಿಂಗ್' ಪಟ್ಟವನ್ನು ಉಳಿಸಿಕೊಳ್ಳುವ ಯಾವ ಯತ್ನಗಳೂ ಕೈಗೂಡಿಲ್ಲ. ಮುನ್ನಾಭಾಯಿ, ಪೀಕೆ ಮುಂತಾದ ಸೂಪರ್‌ಹಿಟ್ ಕಾಮಿಡಿ ಸಿನಿಮಾಗಳನ್ನು ಕೊಟ್ಟ ನಿರ್ದೇಶಕ ರಾಜ್‌ಕುಮಾರ್ ಹಿರಾನಿ ಜೊತೆಗೆ ಹೊಸ ಸಿನಿಮಾ ಮಾಡುವ ಪ್ರಯತ್ನವೂ ಸದ್ಯಕ್ಕೆ ನಿಂತಿದೆ. ಕೆನಡಾಕ್ಕೆ ವಲಸೆ ಹೋದ ಭಾರತೀಯನೊಬ್ಬನ ಕಥೆ ಇಟ್ಟುಕೊಂಡು ಈ ಸಿನಿಮಾದ ಚಿತ್ರಕಥೆ ಸಿದ್ಧವಾಗಿತ್ತು. ಆದರೆ ಕೆನಡಾದಲ್ಲಿ ಸದ್ಯಕ್ಕೆ ಶೂಟಿಂಗ್‌ಗೆ ಅನುಮತಿ ಸಿಗುವುದು ಕಷ್ಟ ಎಂದು ಆ ಚಿತ್ರದ ಶೆಡ್ಯೂಲ್ ಮುಂದಕ್ಕೆ ಹೋಗಿದೆ.

ಹಾಗೆಂದು ಶಾರೂಕ್ ಜನಪ್ರಿಯತೆ ಮುಕ್ಕಾಗಿಲ್ಲ. ಮುಂಬೈಯ ಸಮುದ್ರಕ್ಕೆ ಮುಖ ಮಾಡಿರುವ ಅವರ ಬಂಗಲೆ 'ಮನ್ನತ್' ಮುಂದೆ ಪ್ರತಿದಿನ ಅಭಿಮಾನಿಗಳು ಹಾಜರಾಗುತ್ತಾರೆ. ಗೇಟಿನ ಮುಂದೆ ಸೆಲ್ಫೀ ಕ್ಲಿಕ್ಕಿಸುತ್ತಾರೆ. ಶಾರೂಕ್ ಸಿನಿಮಾಗಳಿಗೆ ರೆಡಿ ಮಾರುಕಟ್ಟೆ ಇದೆ. ಆದರೆ ರೊಮ್ಯಾಂಟಿಕ್ ಹೀರೊ ಪಾತ್ರಗಳಿಂದ ಒಂದು ಪರಿಣಾಮಕಾರಿ ಹೊರಳು ಶಾರೂಕ್‌ಗೆ ಅಗತ್ಯವಿದೆ. ಸೆಪ್ಟೆಂಬರ್ ಕೊನೆಯಲ್ಲಿ ಯಶ್ ಛೋಪ್ರಾ ಅವರ ಹುಟ್ಟುಹಬ್ಬದ ಸಂದರ್ಭದಲ್ಲಿ ಸೆಟ್ಟೇರಲಿರುವ ಹೊಸ ಥ್ರಿಲ್ಲರ್ ಚಿತ್ರಕ್ಕೆ ಶಾರೂಕ್ ನಾಯಕ ಎನ್ನುವ ಹೊಸ ಸುದ್ದಿ ಹರಿದಾಡುತ್ತಿದೆ. ದೀಪಿಕಾ ನಾಯಕಿ ಎಂದೂ ಹೇಳಲಾಗುತ್ತಿದೆ.

'ಸಿನಿಮಾ ಕುರಿತ ನನ್ನ ಮೋಹ ಉದ್ದೇಶವಾಗಿ ಮತ್ತು ಕೊನೆಗೆ ವೃತ್ತಿಯಾಗಿ ಬದಲಾದದ್ದು ಹೇಗೆ ಎನ್ನುವುದು ಗೊತ್ತಾಗಲೇ ಇಲ್ಲ. ಇಷ್ಟು ವರ್ಷಗಳ ಕಾಲ ನಿಮ್ಮನ್ನು ಮನರಂಜಿಸಲು ಅವಕಾಶ ಕೊಟ್ಟಿದ್ದಕ್ಕೆ ಥ್ಯಾಂಕ್ಸ್' ಎಂದಿದ್ದಾರೆ ಶಾರೂಕ್. ಆದರೆ ಮನರಂಜನೆಯ ಪರಿಕಲ್ಪನೆ ವೇಗವಾಗಿ ಬದಲಾಗುತ್ತಿದೆ ಎನ್ನುವುದನ್ನು ಅರ್ಥ ಮಾಡಿಕೊಳ್ಳದಿದ್ದರೆ ಯಾವ 'ಕಿಂಗ್' ಪಟ್ಟವೂ ಶಾಶ್ವತವಲ್ಲ. ಕಮರ್ಷಿಯಲ್ ಸಿನಿಮಾ ಹೀರೋಗಳಿಗೆ ಇಮೇಜ್ ಮುಖ್ಯ. ಶಾರೂಕ್‌ಗೆ ಹೊಸ ಇಮೇಜ್ ಕಲ್ಪಿಸಿಕೊಡುವ ನಿರ್ದೇಶಕರು ಯಾರು ಎನ್ನುವುದು ಈಗಿರುವ ಪ್ರಶ್ನೆ.

■ **ಹನಿ**

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65